ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಸುರಪುರ
ಸಾಃ ಸುರಪುರ

**ಸಿ ಸಿ ನಂ. 11/2024**

ಪಿರ್ಯಾದಿ ಃ ಕರ್ನಾಟಕ ಸರ್ಕಾರ ಸುರಪುರ ಪೋಲಿಸ ಠಾಣೆ

ವಿರುದ್ಧ

ಆರೋಪಿತರು ಃ ಸೋಮಪ್ಪ ತಂದೆ ಯಲ್ಲಪ್ಪ ಚಾಕರಿ

ದಂಡ ಪ್ರಕಿಯಾ ಸಂಹಿತೆ ಕಲಂ **240 (1)** ರಡಿಯಲ್ಲಿ ದೋಷಾರೋಪಣೆ

ನಾನು ಬಸವರಾಜ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಸುರಪುರ ಈ ಮುಲಕ ನಿಮ್ಮ ಮೇಲೆ ರಚಿಸುವ ದೋಷಾರೋಪಣೆ ಏನೆಂದರೆ,

01. ಸೋಮಪ್ಪ ತಂದೆ ಯಲ್ಲಪ್ಪ ಚಾಕರಿ
ವಯಸ್ಸುಃ ವರ್ಷ, ಉಃ ಕೂಲಿಕೆಲಸ

ಮೊದಲನೆದಾಗಿ ದಿನಾಂಕ 27.06.2011 ರಂದು ರಾತ್ರಿ 07.15 ಗಂಟೆ ಸುಮಾರಿಗೆ ಸುರಪುರ ಪೋಲಿಸ ಠಾಣೆ ವ್ಯಾಪ್ತಿಯ ಬೋನಾಳ ಗ್ರಾಮದಲ್ಲಿ ಚಾಸಾ1 ಮತ್ತು 2 ರವರು ತಮ್ಮ ಮನೆಯ ಮುಂದೆ ಇದ್ದಾಗ ಹೊಲದ ವಿಷಯಕ್ಕೆ ಸಂಬಂಧಿಸಿದಂತೆ ಆರೋಪಿತನಾದ ನೀನು ಚಾಸಾ1 ಮತ್ತು 4 ರವರಿಗೆ ಉದ್ರೇಖಿಸುವ ಉದ್ದೇಶದಿಂದ ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೇರೆಗೆ ಭಾ.ದಂ.ಸಂ.ಕಲಂ 504 ರ ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿದ್ದಿರಿ.

ಎರಡನೇಯದಾಗಿ ಮೇಲೆ ನಮೂದಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಈ ಕೇಸಿನ ಆರೋಪಿತನಾದ ನೀನು ಚಾಸಾ4 ರವರಿಗೆ ಕಲ್ಲಿನಿಂದ ಎಡಭುಕ್ಕೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಪಡಿಸಿದ್ದು, ಆ ಮೇರೆಗೆ ಭಾ.ದಂ.ಸಂ.ಕಲಂ 324 ಹಾಗೂ ಸ/ವಾ ಕಲಂ 34 ರ ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿದ್ದಿರಿ.

ಕೊನೆಯದಾಗಿ ಮೇಲೆ ನಮೂದಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಈ ಕೇಸಿನ ಆರೋಪಿತನಾದ ನೀನು ಚಾಸಾ1 ಮತ್ತು 4 ರವರಿಗೆ ಜೀವದ ಬೆದರಿಕೆ ಹಾಕಿದ್ದು, ಆ ಮೇರೆಗೆ ಭಾ.ದಂ.ಸಂ.ಕಲಂ 506 ಹಾಗೂ ಸ/ವಾ ಕಲಂ 34 ರ ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿದ್ದಿರಿ.

ಸದರಿ ಆರೋಪದ ಮೇಲೆ ನೀವು ಈ ನ್ಯಾಯಾಲಯದಿಂದ ಆರೋಪ

ವಿಚಾರಣೆಗೆ ಗುರಿಯಗತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ಪ್ರ.ದಾ.ನ್ಯಾದಂಡಾಧಿಕಾರಿಗಳು
ಸುರಪುರ

**ಆರೋಪಿತನ ಉತ್ತರ**

ಪ್ರಶ್ನೆ 1) ಈಗ ನಿಮಗೆ ಓದಿ ಹೇಳಿದ ದೋಷಾರೋಪಣೆಯ/ಆಪಾದನೆಯ ಸಾರಾಂಶ ತಿಳಿಯಿತೇ?

ಉತ್ತರಃ

ಪ್ರಶ್ನೆ 2) ಈ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೆಂದು ಬಯಸುವಿರಾ?

ಉತ್ತರಃ

(ಈ ಮೇಲಿನ ಆಪಾದನೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ, ಹೇಳಿ ಆರೋಪಿ ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಂಡಿದೆ ಎಂದು ಪ್ರಮಾಣೀಕರಿಸುತ್ತೇನೆ)

**(ಬಸವರಾಜ)**
ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.ಗಳು.
ಸುರಪೂರ.

ಸ್ಥಳಃ ಸುರಪೂರ
ದಿನಾಂಕಃ 25.11.2025

ಆರೋಪಿತನ ಸಹಿ